

# ಅನೂಪ್ ಎನ್ನುವ ಹಿತಕರ ಆಲಾಪ

**ಸಿನಿಮಾ ಸಂಗೀತದಲ್ಲಿ ಸ್ವಂತಿಕೆ ಎನ್ನುವುದು ನಗೆಪಾಟಲಾಗಿರುವ ಸಂದರ್ಭದಲ್ಲಿ, ಅನೂಪ್ ಸೀಳಿನ್ ಹಾಡುಗಳಲ್ಲಿ ದೇಸಿ ಘಮಲು ಹಾಗೂ ಕನ್ನಡತನ ಎದ್ದುಕಾಣಿಸುತ್ತಿರುವುದು ವಿಶೇಷ.**

ಅನೂಪ್ ಎನ್ನುವ ಹೆಸರಿಗೆ ಗಾಂಧಿನಗರದಲ್ಲಿ ಅಪರೂಪ ಎನ್ನುವ ಅರ್ಥ ಇರುವಂತಿದೆ. ಜನಪ್ರಿಯತೆಯ ಹೆಸರಿನಲ್ಲಿ ಎಲ್ಲೆಲ್ಲಿಂದಲೋ ಟ್ಯೂನ್‌ಗಳನ್ನು ಎಗರಿಸಿಕೊಂಡು ಬಂದು ಸಂತೆಗೆ ಮೂರು ಹಾಡು ನೇಯುವ ಸಂಗೀತ ಸಂಯೋಜಕರೇ ಹೆಚ್ಚುತ್ತಿರುವ ಸಂದರ್ಭದಲ್ಲಿ, ಅನೂಪ್ ಒಂದರ ಹಿಂದೊಂದು ಕನ್ನಡ ಘಮದ ಹಾಡುಗಳನ್ನು ರೂಪಿಸುತ್ತಿರುವುದು ಗಮನಾರ್ಹ.

ಇತ್ತೀಚೆಗೆ ಪೇಟೆಗೆ ಬಂದ ಸಿನಿಮಾಗಳ ಕೆಲವು ಆಲ್ಬಂಗಳನ್ನು ಸುಮ್ಮನೆ ಗಮನಿಸಿ ನೋಡಿ: 'ಕಾಫಿತೋಟ', 'ಎಳೆಯರು ನಾವು ಗೆಳೆಯರು', 'ದಯವಿಟ್ಟು ಗಮನಿಸಿ' – ಇವುಗಳೆಲ್ಲ ಹೈಬ್ರಿಡ್ ಹೂಗಳ ಮಳಿಗೆಯಲ್ಲಿನ ಮಲ್ಲಿಗೆಗಳಂತೆ ಕಾಣಿಸುತ್ತವೆ. ಇವೆಲ್ಲ ಅನೂಪ್ ಸಂಗೀತ ಸಂಯೋಜನೆಯ ಹಾಡುಗಳನ್ನೊಳಗೊಂಡ ಸಿನಿಮಾಗಳ ಗೀತಗುಚ್ಛಗಳು. 'ಎಳೆಯರು ನಾವು ಗೆಳೆಯರು' ಸಿನಿಮಾದ ಗೀತೆಗಳಂತೂ ಚಿಣ್ಣರಿಗೆ ಗುಂಗು ಹಿಡಿಸುವ ಗುಣ ಹೊಂದಿವೆ.

ಅನೂಪ್ ಚಿತ್ರರಂಗಕ್ಕೆ ಬಂದು ಹೆಚ್ಚೂಕಡಿಮೆ ಹನ್ನೆರಡು ವರ್ಷಗಳಾದವು. ಆದರೆ, ಮೊದಲ ಹತ್ತು ವರ್ಷಗಳಲ್ಲಿ ಅವರು ಕೆಲಸ ಮಾಡಿದ ಸಿನಿಮಾಗಳ ಸಂಖ್ಯೆ ಇಪ್ಪತ್ತರ ಆಸುಪಾಸಿನಲ್ಲಷ್ಟೇ ಇದೆ. 'ಗೂಳಿ', 'ಎದ್ದೇಳು ಮಂಜುನಾಥಾ', 'ಮದರಂಗಿ'ಯಂಥ ಅಲ್ಲೊಂದು ಇಲ್ಲೊಂದು ಸಿನಿಮಾಗಳು ಹೆಸರು ತಂದುಕೊಟ್ಟರೂ ಅವಕಾಶಗಳ ಸಂಖ್ಯೆಯೇನೂ ಹೆಚ್ಚಲಿಲ್ಲ. ಆದರೆ, ಕಳೆದ ಎರಡು ವರ್ಷಗಳಿಂದ ಅವರು ಒಂದರ ನಂತರ ಮತ್ತೊಂದು ಸಿನಿಮಾಗಳಲ್ಲಿ ಸತತವಾಗಿ ಕಾರ್ಯನಿರ್ವಹಿಸುತ್ತಲೇ ಇದ್ದಾರೆ. ಇತ್ತೀಚಿನ 'ನೀರ್ ದೋಸೆ', 'ಎರಡನೇ ಸಲ', 'ಚೌಕ' ಚಿತ್ರದ ಒಂದು ಗೀತೆ – ಇವುಗಳ ಜನಪ್ರಿಯತೆ ಕೂಡ ಅನೂಪ್ ಬಿಡುವು ಕಳೆದುಕೊಳ್ಳಲಿಕ್ಕೆ ಕಾರಣವಾಗಿದೆ.

'ದಾದಾ ಈಸ್ ಬ್ಯಾಕ್', 'ಸೆಕೆಂಡ್ ಬಕೆಟ್ ಬಾಲ್ಕನಿ', 'ಶಾದಿ ಭಾಗ್ಯ', 'ಎಂ ಟಿವಿ ಸುಬ್ಬುಲಕ್ಷ್ಮಿ', 'ಕಳ್ಬೆಟ್ಟದ ದರೋಡೆಕೋರರು' – ಹೀಗೆ ಸದ್ಯಕ್ಕೆ ಅವರ ಕೈಯಲ್ಲಿರುವ ಸಿನಿಮಾಗಳ ಪಟ್ಟಿ ಮುಂದುವರೆಯುತ್ತದೆ. 'ನೀರ್ ದೋಸೆ'ಯ ವಿಜಯಪ್ರಸಾದ್ ಹೊಸ ಚಿತ್ರದ ಕನಸುಗಾರಿಕೆಯೂ ಶುರುವಾಗಿದೆ.

ಸಾಮಾನ್ಯವಾಗಿ ಸಿದ್ಧಪಡಿಸಿದ ಟ್ಯೂನ್‌ಗಳಿಗೆ ಹಾಡುಗಳನ್ನು ಬರೆಯುವುದು ರೂಢಿ. ಆದರೆ, ಅನೂಪ್‌ಗೆ ಸಿದ್ಧಸಾಹಿತ್ಯಕ್ಕೆ ಸ್ವರಗಳನ್ನು ಹೊಂದಿಸುವ ಸವಾಲು ಹೆಚ್ಚು ಪ್ರಿಯವಾದುದು. ಹಾಗಾಗಿಯೇ ಅವರ ಹಾಡುಗಳಲ್ಲಿ ವಾದ್ಯಗಳು ಅಬ್ಬರಿಸಿದೆ ಸಾಹಿತ್ಯ ಸ್ಪಷ್ಟವಾಗಿ ಕೇಳಿಸುತ್ತದೆ.

ಅನೂಪ್ ಹಾಡುಗಳ ಘಮ ಕನ್ನಡಕ್ಕಷ್ಟೇ ಸೀಮಿತವಾಗಿಲ್ಲ. ತಮಿಳಿನ 'ಕಡುಗು' ಚಿತ್ರಕ್ಕೆ ಅವರು ಸಂಯೋಜಿಸಿದ ಸಂಗೀತವೂ ಸಹೃದಯರ ಗಮನಸೆಳೆದಿವೆ. ಆ ಸಂಗೀತಕ್ಕೆ ಮರುಳಾದ ತಮಿಳಿನ ಜನಪ್ರಿಯ ನಟ ಸೂರ್ಯ, ಕಾರ್ಯಕ್ರಮವೊಂದರಲ್ಲಿ ಅನೂಪ್‌ರ ಬೆನ್ನುತಟ್ಟಿ ಹೊಗಳಿದರಂತೆ.

ಗಾಳಿ ಬಂದಾಗ ತೂರಿಕೊಳ್ಳುವ ಮನೋಭಾವ ಅನೂಪ್ ಅವರದ್ದಲ್ಲ. ದೊರೆತ ಅವಕಾಶಗಳಲ್ಲಿ ತಮ್ಮ ಛಾಪು ಮೂಡಿಸುವ ಹಂಬಲ–ಪ್ರಯತ್ನ ಅವರದು. ಇತ್ತೀಚೆಗೆ ತಮ್ಮದೇ ಆದ ಆಡಿಯೊ ಕಂಪೆನಿಯೊಂದನ್ನು ಆರಂಭಿಸಿರುವ ಅವರು, ಸದ್ಯಕ್ಕೆ ಗಾಂಧಿನಗರದಲ್ಲಿನ ಒಂಟಿಪಥಿಕ.

■ **ರಘು**